ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ

ಸಿ.ಸಿ. ನಂ. 658/2021

ಸಿ.ಡಬ್ಲೂಃ 2 ಪಿ.ಡಬ್ಲೂಃ 2

ಹೆಸರುಃ ರಮೇಶ

ತಂದೆಯ ಹೆಸರುಃ ನಾಗಪ್ಪ ಮಡಿವಾಳರ

ವಯಸ್ಸುಃ 29 ವರ್ಷ

ಉದ್ಯೋಗಃ ಪ್ಲಬಿಂಗ್ ಕೆಲಸ

ವಿಳಾಸಃ ಗಜೇಂದ್ರಗಡ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ **23-04-2024** ರಂದು ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ -ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದಃ

**1.** ನಾನು ಈಗ ಒಂದು ದಾಖಲೆ ನೋಡುತ್ತಿದ್ದೇನೆ ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಪಂಚನಾಮೆ ಆಗಿದ್ದು, ಅದನ್ನು ಈಗಾಗಲೇ ನಿಪಿಃ 1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ 1 ಬಿ ಎಂದು ಗುರುತಿಸಲಾಯಿತು. ನಿಪಿಃ 1 ಕ್ಕೆ ನಾನು ಚಾಸಾ-1 ಇವರ ಮನೆಯ ನಲ್ಲಿಯ ಕೆಲಸ ಮಾಡುವಾಗ ಪೊಲೀಸ್ ಠಾಣೆಗೆ ಬಂದು ಮಾಡಿದ್ದೇನೆ. ಸುಮಾರು 4-5 ವರ್ಷಗಳ ಹಿಂದೆ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದೇನೆ. ನಿಪಿಃ1 ರಲ್ಲಿ ಬರೆದ ವಿಚಾರ ಗೊತ್ತಿಲ್ಲ. ನನ್ನ ಜೊತೆ ಬೇರೆ ಯಾರು ನಿಪಿಃ 1 ಕ್ಕೆ ಸಹಿ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಮಾನ್ಯ ಸ ಸ ಅ ರವರು ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಸ.ಸ.ಅ. ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

1. ದಿಃ 08/05/2020 ರಂದು ಬೆಃ 9-30 ರಿಂದ 10-30 ರವರೆಗೆ ಚಾಸಾ-1 ರವರ ಮನೆಯ ಹತ್ತಿರ ಆರೋಪಿಯು ಬಂದು ಬೈದಾಡಿದ್ದ ಸ್ಥಳದಲ್ಲಿ ಪೊಲೀಸರು ಬಂದು ನನ್ನ ಮತ್ತು ಚಾಸಾ-3 ಇವರ ಸಮಕ್ಷಮ ನಿಪಿ-1 ರಂತೆ ಪಂಚನಾಮೆ ಮಾಡಿದರು ಎಂದರೆ ಸರಿಯಲ್ಲ.

2. ಈ ಎಲ್ಲಾ ಸಂಗತಿಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

ಪಾಟೀ ಸವಾಲು ಆರೋಪಿ ಪರ ವಕೀಲರು ಏನು ಇಲ್ಲಾ ಎಂದು ಹೇಳುತ್ತಾರೆ.

ಮರುವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**

ಪ್ರಧಾನ ಸಿವಿಲ್ ಹಾಗೂ ಜೆ .ಎಮ್ .ಎಫ್.ಸಿ

ನ್ಯಾಯಾಧೀಶರು ರೋಣ .